# ಚಾತುರ್ಮಾಸದಲ್ಲಿ ಗುರುಗಳ ಭೇಟಿ

**ಕಳೆದ ಚಾತುರ್ಮಾಸವನ್ನು ಮುಂಬೈಯಲ್ಲಿ ಆಚರಿಸಿದ ನಮ್ಮ ಕುಲಗುರುಗಳಾದ ದಕ್ಷಿಣಾಮ್ನಾಯ ಶ್ರೀ ಕ್ಷೇತ್ರ ಶೃಂಗೇರಿಯ ಜಗದ್ಗುರುಗಳಾದ ಶ್ರೀ ಭಾರತೀ ತೀರ್ಥ ಮಹಾ ಸನ್ನಿಧಾನಂಗಳವರನ್ನು ಈ ವರ್ಷ ಚಾತುರ್ಮಾಸದ ಅವಧಿಯಲ್ಲಿ ಶ್ರೀ ಕ್ಷೇತ್ರ ಶೃಂಗೇರಿಯಲ್ಲಿಯೇ ಸಮಾಜ ಬಾಂಧವರು ಜೊತೆಯಾಗಿ ಸೇರಿ ಗುರುಗಳ ದರ್ಶನ ಪಡೆಯಲು ಉದ್ದೇಶಿಸಲಾಗಿದೆ.**

**ಶ್ರೀ ಗುರುಗಳೇ ಈ ಹಿಂದೆ ನೀಡಿದ ಆದೇಶದಂತೆ ಗಣೇಶ ಚತುರ್ಥಿಯ ಹಿಂದಿನ ಭಾನುವಾರ ಎಂದರೆ ತಾ.31-08-2008ರಂದು ಈ ವರ್ಷ ಶ್ರೀ ಗುರುಗಳ ಆಶೀರ್ವಾದಕ್ಕಾಗಿ ತೆರಳುವುದೆಂದು ಉಡುಪಿಯ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘವು ನಿಶ್ಚಯಿಸಿದೆ. ಅದಕ್ಕಾಗಿ ಹೆಚ್ಚಿನ ಸಂಖ್ಯೆಯಲ್ಲಿ ಸಮಾಜ ಬಾಂಧವರು ಆಗಮಿಸಬೇಕೆಂದು ಸಂಘದ ಪದಾಧಿಕಾರಿಗಳು ಕರೆನೀಡಿದ್ದಾರೆ. ಆಸಕ್ತರು ಶಾರದಾ ಮಂಟಪದ ಮೆನೇಜರ್‌ರಲ್ಲಿ ವಿಚಾರಿಸಬಹುದು. (ದೂರವಾಣಿ: 2520754)**

# ಜೀವನ

ಸಂಗ್ರಹ, ಅನುವಾದ : **ಶ್ರೀಮತಿ ಪ್ರಸನ್ನಾ ಪ್ರಕಾಶ್, ಮಣಿಪಾಲ.**

ಪುರುಸೊತ್ತಿಲ್ಲ. ದಿನದ ಇಪ್ಪತ್ತನಾಲ್ಕು ಗಂಟೆಯೂ ಸಾಲುವುದಿಲ್ಲ. ಇದು ಇಂದು ನಾವೆಲ್ಲ ಕೇಳುವ, ಹೇಳುವ ಮಾತು. ಯಾಕೆ ಇವತ್ತು ಎಲ್ಲರೂ ಹೀಗಿದ್ದಾರೆ? ಪತಿ ಪತ್ನಿ ಇಬ್ಬರೂ ಕೆಲಸಕ್ಕೆ ಹೋಗುತ್ತಾರೆ. ಮಕ್ಕಳು ಶಾಲೆಗೆ ಹೋಗುತ್ತಾರೆ. ಅವರೆಲ್ಲ ಒಟ್ಟು ಸೇರಿ ಸಂತೋಷದಿಂದ ಕಳೆಯಲು ಸಮಯ ಸಾಲುವುದಿಲ್ಲ. "Busy Life" ಎಂಬುದು ಆಧುನಿಕ ಜಗತ್ತಿನ ಕೊಡುಗೆ. ಇದನ್ನು ಒಬ್ಬ ಫಿಲಾಸಫಿ ಪ್ರೊಫೆಸರ್ ತಮ್ಮ ತರಗತಿಯಲ್ಲಿ ಯಾವ ರೀತಿ ವಿವರಿಸಿದರು ಎಂದು ನೋಡೋಣ.

ಗಾಜಿನ ದೊಡ್ಡದೊಂದು ಪಾತ್ರೆಯನ್ನು ಮೇಜಿನ ಮೇಲಿರಿಸಿದ ಪ್ರೊಫೆಸರ್ ಅದರೊಳಗೆ ಗೋಲ್ಫ್ ಬಾಲ್‌ಗಳನ್ನು ತುಂಬಿಸಿದರು. "ಪಾತ್ರೆ ತುಂಬಿದೆಯೇ?" ಎಂಬ ಅವರ ಪ್ರಶ್ನೆಗೆ ವಿದ್ಯಾರ್ಥಿಗಳೆಲ್ಲ ಹೌದೆಂದರು. ಈಗ ಒಂದಷ್ಟು ಮರಳಿನ ಕಲ್ಲುಗಳನ್ನು (Peebles) ಪಾತ್ರಗೆ ಹಾಕಿ ಪಾತ್ರೆಯನ್ನು ಕಲಕಿದರು. ಅವುಗಳು golf ball ಗಳ ಮಧ್ಯ ಮಧ್ಯೆ ಹೋಗಿ ಸೇರಿಕೊಂಡವು. ವಿದ್ಯಾರ್ಥಿಗಳಿಗೆ ಆಶ್ಚರ್ಯವಾಯಿತು. ಒಂದಷ್ಟು ಮರಳನ್ನು ಪಾತ್ರೆಗೆ ಸುರಿಯಲಾಯಿತು. ಮರಳು ಎಡೆಗಳಲ್ಲಿ ಹೋಗಿ ಸೇರಿಕೊಂಡಿತು. ಮತ್ತಷ್ಟು ಆಶ್ಚರ್ಯವಾಯಿತು. ವಿದ್ಯಾರ್ಥಿಗಳಿಗೆ, ಅದು ಹೇಗೆ ಪಾತ್ರೆಯಲ್ಲಿ ಜಾಗವಿದೆ? ಎಂದು ಪ್ರೊಫೆಸರ್ ಎರಡು ಲೋಟ ಕಾಫಿ ತರಿಸಿ ಪಾತ್ರೆಗೆ ಸುರಿದರು. ಅದಕ್ಕೂ ಪಾತ್ರೆಯಲ್ಲಿ ಜಾಗ ಸಿಕ್ಕಿತು. ವಿದ್ಯಾರ್ಥಿಗಳೇ ಈ ಪಾತ್ರೆಯು ನಿಮ್ಮ ಜೀವನದ ಸಂಕೇತ. Golf Ball ಗಳು ಜೀವನದ ಜೀವನದ ಮುಖ್ಯ ಅಂಶಗಳಾದ ದೇವರು, ನಿಮ್ಮ ಸಂಸಾರ, ಆರೋಗ್ಯ, ನೆಮ್ಮದಿ, ಗೆಳೆಯರು, ನಿಮ್ಮ ಗುರಿ ಮುಂತಾದವುಗಳನ್ನು ಪ್ರತಿನಿಧಿಸುತ್ತವೆ. ಇವುಗಳಿಂದಲೇ ನಿಮ್ಮ ಜೀವನ ಪರಿಪೂರ್ಣ.

ಇನ್ನು ಮರಳಿನ ಕಲ್ಲುಗಳು ಜೀವನದಲ್ಲಿ ಕಡಿಮೆ ಪ್ರಾಮುಖ್ಯತೆ ಪಡೆದ ಆಸ್ತಿ, ಅಂತಸ್ತು, ಅಧಿಕಾರ ಮುಂತಾದವುಗಳನ್ನು ಪ್ರತಿನಿಧಿಸುತ್ತವೆ. ಮರಳು ಜೀವನದಲ್ಲಿ ಮತ್ತೂ ಕಡಿಮೆ ಪ್ರಾಶಸ್ತ್ಯ ಪಡೆದ ಅಂಶಗಳ ಪ್ರತಿನಿಧಿ. ಪಾತ್ರೆಗೆ ಮೊದಲು ಮರಳು ತುಂಬಿಸಿ, ನಂತರ ಕಲ್ಲುಗಳನ್ನು ಮತ್ತೆ Golf Ball ಗಳನ್ನು ಹಾಕಿದ್ದರೆ ಎಲ್ಲವನ್ನು ಹಿಡಿದಿಡಲು ಆ ಪತ್ರೆ ಸಾಲುತ್ತಿರಲಿಲ್ಲ. ಜೀವನವೂ ಅಷ್ಟೆ ಮೊದಲು ನಿಮ್ಮ ನೆಮ್ಮದಿಗೆ ಸಂತೋಷಕ್ಕೆ ಕಾರಣವಾಗುವ ಪ್ರಮುಖ ಅಂಶಗಳತ್ತ ಗಮನ ಹರಿಸಿ ನಂತರ ಬೇರೆ ವಿಚಾರಗಳು, ಎಂದರು

ವಿದ್ಯಾರ್ಥಿಯೊಬ್ಬ ಎದ್ದು ನಿಂತು "ಸಾರ್ ಕಾಫಿ ಏನನ್ನು ಪ್ರತಿನಿಧಿಸುತ್ತದೆ?" ಎಂದು ಕೇಳಿದಾಗ ಪ್ರೊಫೆಸರ್ ಹೇಳಿದರು, "ನಿಮ್ಮ ಜೀವನ ಎಷ್ಟೇ ಪೂರ್ಣವೆನಿಸಿದರೂ ಗೆಳೆಯರ ಜೊತೆ ಕಾಫಿ ಕುಡಿಯಲು ಸ್ವಲ್ಪ ಸಮಯವಿದ್ದೇ ಇರುತ್ತದೆ".

ಇಂಗ್ಲಿಷ್‌ನಲ್ಲಿ ಹೇಳಿಕೆಯೊಂದು ಈ ಸಂದರ್ಭದಲ್ಲಿ ಪ್ರಸ್ತುತವೆನಿಸುತ್ತದೆ.

Love your self. Roam with your understanding. Romance with your dreams. Get engaged with your simplicity. Marry genuineness. Divorce the ego. That Life.

## ಶ್ರೀ ಶಾರದಾ ಕ್ರೆಡಿಟ್ ಕೋ-ಅಪರೇಟಿವ್ ಸೊಸೈಟಿ (ನಿ.), ಉಡುಪಿ.

ಎಲ್.ನಂ.31017, ವಾದಿರಾಜ ರಸ್ತೆ, ಉಡುಪಿ - 1. ಫೋನ್ : 2522408

### ಬೇಕಾಗಿದ್ದಾರೆ

**ಶ್ರೀ ಶಾರದಾ ಕ್ರೆಡಿಟ್ ಕೋ-ಅಪರೇಟಿವ್ ಸೊಸೈಟಿ (ನಿ.)ಯಲ್ಲಿ ಕ್ಲಾರ್ಕ್ (Clerk) ಹುದ್ದೆಗೆ ಪದವೀದರ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.**

**ಆಸಕ್ತ ಅಭ್ಯರ್ಥಿಗಳು ತಮ್ಮ ವಯಸ್ಸು, ವಿದ್ಯಾರ್ಹತೆ (ಅಂಕಪಟ್ಟಿಯ ಪ್ರತಿಯೊಂದಿಗೆ) ಇತ್ಯಾದಿ ವಿವರಗಳೊಂದಿಗೆ ತಮ್ಮ ಅರ್ಜಿಯನ್ನು ತಾ.15-8-2008ರ ಒಳಗಾಗಿ ತಲಪುವಂತೆ ಮೇಲೆ ತಿಳಿಸಿದ ವಿಳಾಸಕ್ಕೆ ಪ್ರತ್ಯಕ್ಷವಾಗಿ ಅಥವಾ ಅಂಚೆ ಮೂಲಕ ಸಲ್ಲಿಸುವಂತೆ ಕೇಳಿಕೊಳ್ಳಲಾಗಿದೆ. ಕಂಪ್ಯೂಟರ್ ಅನುಭವವಿರುವವರಿಗೆ ಆದ್ಯತೆಯಿದೆ.**

**- ಕಾರ್ಯದರ್ಶಿ**

## ಉಡುಪಿಯಲ್ಲಿ

## ಡಾ। ದಯಾನಂದ ಎಸ್. ರಾವ್ ಟ್ರಸ್ಟ್-ಸಾಲ ವಿದ್ಯಾರ್ಥಿ ವೇತನ

### ಅರ್ಜಿ ಆಹ್ವಾನ

**ಡಾ। ದಯಾನಂದ ಎಸ್. ರಾವ್ ಎಜ್ಯುಕೇಶನ್ ಟ್ರಸ್ಟ್, ಬೆಂಗಳೂರು, ಇವರು "ರತ್ನಾಬಾಯಿ ಸ್ಮಾರಕ ಸಾಲ ವಿದ್ಯಾರ್ಥಿವೇತನ"ಕ್ಕಾಗಿ ಉಡುಪಿ ಕುಂಜಿಬೆಟ್ಟಿನ ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.),ಕ್ಕೆ ಸಾಲ ವಿದ್ಯಾರ್ಥಿವೇತನ ನೀಡಲು ನಗದು ಹಣವನ್ನು ಒದಗಿಸಿದ್ದಾರೆ. ಈ ಮೊಬಲಗನ್ನು ಟ್ರಸ್ಟ್‌ನ ನಿಬಂಧನೆಯಂತೆ ಕಲಿಕೆ ಸಮಯದಲ್ಲಿ ಬಡ್ಡಿ ರಹಿತ ಸಾಲ ರೂಪದಲ್ಲಿ ವಿದ್ಯಾರ್ಥಿಗಳಿಗೆ ನೀಡಲಾಗುವುದು. 2008-2009ನೇ ಶೈಕ್ಷಣಿಕ ಸಾಲಿನಲ್ಲಿ ವೃತ್ತಿಪರ ತರಗತಿಗಳಿಗೆ ಸೇರಿದ ಉಡುಪಿ, ದಕ್ಷಿಣ ಕನ್ನಡ ಜಿಲ್ಲೆಯ ಇಂಜಿನಿಯರಿಂಗ್, ಮೆಡಿಕಲ್, ಇತ್ಯಾದಿ ತರಗತಿಗಳ ವಿದ್ಯಾರ್ಥಿಗಳಿಗೆ ಈ ಸಾಲ ವಿದ್ಯಾರ್ಥಿವೇತನವನ್ನು ನೀಡಲಾಗುವುದು. ಅವರ ಅಗತ್ಯತೆ, ಆರ್ಥಿಕ ಸ್ಥಿತಿಗತಿ ಮತ್ತು ಪ್ರತಿಭೆಯನ್ನಾಧರಿಸಿ ಸಾಲ ಮಂಜೂರು ಮಾಡಲಾಗುವುದು. ಸಾಲ ವಿದ್ಯಾರ್ಥಿ ವೇತನವನ್ನು ವಿದ್ಯಾರ್ಥಿಯ ಮುಂದಿನ ವರ್ಷಗಳ ಪ್ರಗತಿಯನ್ನು ಪರಿಶೀಲಿಸಿ ಪೂರ್ಣ ಅಧ್ಯಯನ ಅವಧಿಯಲ್ಲಿ ಮುಂದುವರಿಸಲಾಗುವುದು.**

**ಸಾಲ ವಿದ್ಯಾರ್ಥಿವೇತನವನ್ನು ಪಡೆಯಲು ಆಸಕ್ತಿಯುಳ್ಳ ವಿದ್ಯಾರ್ಥಿಗಳು ತಮ್ಮ ಹೆಸರು, ರಕ್ಷಕರ ಹೆಸರು, ಪರೀಕ್ಷೆಯ ಅಂಕಪಟ್ಟಿ ಹಾಗೂ ವಿದ್ಯಾಭ್ಯಾಸ ಮಾಡುವ/ಮುಂದುವರಿಸುವ ಬಗ್ಗೆ ದಾಖಲೆಯೊಂದಿಗೆ (ವ್ಯಾಸಂಗ ಪ್ರಮಾಣ ಪತ್ರ) ಈ ಕೆಳಗಿನ ವಿಳಾಸಕ್ಕೆ ತಾ.1-8-2008ರ ಒಳಗೆ ತಲಪುವಂತೆ ಕಳುಹಿಸಬೇಕು. (ಕಳೆದ ಸಾಲಿನಲ್ಲಿ ಸಾಲ ವಿದ್ಯಾರ್ಥಿ ವೇತನ ಪಡೆದುಕೊಂಡ ಅಭ್ಯರ್ಥಿಗಳು ನವೀಕರಣಕ್ಕಾಗಿ ಕಳೆದ ಸಾಲಿನ ತಮ್ಮ ವ್ಯಾಸಂಗದ ಪ್ರಗತಿಯ ವಿವರಗಳೊಂದಿಗೆ ಮತ್ತೆ ಅರ್ಜಿ ಸಲ್ಲಿಸಬೇಕು.)**

**ಸಂಚಾಲಕರು,** ವಿದ್ಯಾರ್ಥಿ ವೇತನ ವೇದಿಕೆ, ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.),
ಶ್ರೀ ಶಾರದಾ ಮಂಟಪ ಕುಂಜಿಬೆಟ್ಟು ಉಡುಪಿ - 576 102. ಫೋನ್ : 0820-2520754

# ತಂತ್ರ ಪ್ರಪಂಚ

(...2ನೇ ಪುಟದಿಂದ)

ಭೂಮಿಯನ್ನು (ಭಾರತವನ್ನು) ಮೂರುಭಾಗ ಮಾಡಿ ಅವುಗಳಲ್ಲಿ ಪ್ರತಿಯೊಂದಕ್ಕೂ 64 ತಂತ್ರಗಳನ್ನು ನಿರ್ಣಯಿಸಿದ್ದಾರೆ. ಆ ಮೂರು ಭಾಗಗಳಿಗೆ ರಥಕ್ರಾಂತ, ವಿಷ್ಣುಕ್ರಾಂತ, ಅಶ್ವಕ್ರಾಂತಗಳೆಂದು ಹೆಸರು.

ಗಣಪತಿಯ ಗಾಣಪತ್ಯ ತಂತ್ರವೂ ವಿಶಾಲ ಸಾಹಿತ್ಯದಿಂದ ಕೂಡಿದೆ. ಗಣತಿಯಲ್ಲಿ ಗಿರಿ, ಕ್ಷಿಪ್ರ, ಸಿದ್ಧಿ, ನವನೀತ, ಶಕ್ತಿ, ಉಚ್ಛಿಷ್ಟ, ಏಕಾಕ್ಷರೀ ಎಂಬ ಪ್ರಭೇದಗಳಿವೆ. ಆ ಗಣಪತಿಗಳ ಉಪಸನಾಕ್ರಮಗಳನ್ನು ಗಾಣಪತ್ಯ ತಂತ್ರಗಳು ವಿವರಿಸುತ್ತವೆ. ಪೂರ್ವಾಮ್ನಾಯದ ವಿರಿಂಚಿ ಗಣಪತಿ, ದಕ್ಷಿಣಾಮ್ನಾಯದ ಲಕ್ಷ್ಮೀಗಣಪತಿ, ಪಶ್ಚಿಮಾಮ್ನಾಯದ ವಿಘ್ನಗಣೇಶರು ಪ್ರಸಿದ್ಧರು. ಇವರಲ್ಲದೇ ಅರ್ಕ, ದೂರ್ವಾಗಣಪತಿಗಳೂ ಪೂಜಿಸಲ್ಪಡುತ್ತಾರೆ.

ಹೀಗೆ ಬೌದ್ಧ, ಜೈನತಂತ್ರಗಳೂ ವಿಸ್ತಾರವಾಗಿವೆ, ಭಗವಾನ್ ಬುದ್ಧನು ಪರಿನಿರ್ವಾಣ ಹೊಂದಿದ 28 ವರ್ಷಗಳ ಮೇಲೆ ಸಿಂಹಳದ ಮಲಯ ಪರ್ವತದ ಮೇಲೆ ಐವರು ಸತ್ಕುಲ ಬೌದ್ಧರು ಕುಳಿತು 23 ಪ್ರಾರ್ಥನೆಗಳಿಂದ ಬುದ್ಧನನ್ನು ಸ್ತುತಿಸಿದರು. ಬುದ್ಧನು ಗುಹ್ಯಪತಿ ವಜ್ರಪಾಣಿಯಾಗಿ ಕಾಣಿಸಿಕೊಂಡು ತಂತ್ರಗಳ ಉಪದೇಶಮಾಡಿದನಂತೆ. ಇವೇ ಬೌದ್ಧ ತಂತ್ರಗಳು.

ಜೈನರ ಆದಿತೀರ್ಥಂಕರ ಋಷಭದೇವನು ಜೈನತಂತ್ರಗಳ ಪ್ರವರ್ತಕನೆನ್ನುತ್ತಾರೆ. ಋಷಭದೇವನ ಮಗನಾದ ನಮಿನಾಥನಿಗೆ ಸರ್ಪರಾಜನು ಆಕಾಶದಲ್ಲಿ ಸಂಚರಿಸುವ ವಿದ್ಯೆಯನ್ನು ಹೇಳಿಕೊಟ್ಟನಂತೆ. ಹೀಗೆ ಗಂಧರ್ವರಿಗೂ, ನಾಗರಿಗೂ 48 ಸಾವಿರ ವಿದ್ಯೆಗಳನ್ನು ಹೇಳಿದನಂತೆ.

ಅಂತು ತಂತ್ರಶಾಸ್ತ್ರ ನಮ್ಮ ದೇಶದ ಅತ್ಯಮೂಲ್ಯ ಸಾಹಿತ್ಯವಾಗಿದೆ. ಇದರ ಅಧ್ಯಯನ, ಅಧ್ಯಾಪನಗಳ ಕಡೆಗೆ ನಮ್ಮ ಲಕ್ಷ್ಯ ಹರಿಯಬೇಕು. □


## ದೇವಿಕೃಪಾ ಏಜೆನ್ಸೀಸ್, ನಂದಿಕೂರು

**ಫೋನ್** : 2556536 (R), 2555466 (0)



**ಶಾಂತಲಾ 100 ಅಗರ್ ಬತ್ತಿಯ ಮುಖ್ಯ ವಿತರಣೆಗಾರರು ಹಾಗೂ ಕರ್ಪೂರ, ಲೋಬಾನ ಮುಂತಾದವುಗಳ ರಖಂ ವ್ಯಾಪಾರಸ್ಥರು.**

**ಪ್ರೊ। ಎಸ್. ಜನಾರ್ದನ್ ರಾವ್**
ದೇವಿಕೃಪಾ, ನಂದಿಕೂರು, ಉಡುಪಿ ತಾಲೂಕು

## ಸದಾಶಯ

ಸ್ಥಾನಿಕ ಬ್ರಾಹ್ಮಣ ವಧೂ-ವರರ ಮಾಹಿತಿ ಕೇಂದ್ರ

ಚಿಟ್ಪಾಡಿ, ಉಡುಪಿ.

**: ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿರಿ :**

**ಎಂ. ಸದಾನಂದರಾವ್ ಮತ್ತು ಎಂ. ಸಂತೋಷರಾವ್, ಚಿಟ್ಪಾಡಿ, ಉಡುಪಿ**

Ph : 2522638, 2523394


Owned & Published by ·. Y. Bhuvanendra Rao, Secretary Sthanika Dravida Brahmana Sangha (R.), Shri Sharada Mantapa, Kunjibettu, Udupi - 576 102. Ph : 0820-2520754
Edited by Y. Mohan Rao, Designed @ SriNidhi Computer Graphics, Bailur, Udupi, Printed at Agrahara Offsets, Udupi - 576 101. E-mail : srisharadaudupi@yahoo.co.in Website : www.srisharada.org